ಕರ್ನಾಟಕ ಸರ್ಕಾರ

ಸಂ. ಎಎಲ್.ಎನ್.(ಪೂ)(ಬಿಹೋ)ಎಸ್.ಆರ್.213/2005-06

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು:ದಿ:27.02.2006

:ಅಧಿಕೃತ ಜ್ಞಾಪನ:

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು. ಬಿದರಹಳ್ಳಿ ಹೋಬಳಿ, ಮಾರಗೋಂಡನಹಳ್ಳಿ ಗ್ರಾಮದ ಸರ್ವೆ ನಂ. 19/2 ವಿಸ್ತೀರ್ಣ 01-15. (ಎಕರೆ/ಗುಂಟೆ) ದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ. ಕೆ. ಮುನಿಯಪ್ಪ @ ಕೆ. ಮುನಿರಾಜು. ಬಿನ್ ಲೇಟ್. ಕೃಷ್ಣಪ್ಪ, ಮಾರಗೋಂಡನಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ರವರು ಸಲ್ಲಿಸಿರುವ ಅರ್ಜಿ ದಿನಾಂಕ: 29-11-2005.

ಉಲ್ಲೇಖ:

1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ 577 ಎಲ್‌ಜಿಪಿ 195,

2) ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ರವರ ವರದಿ ಸಂಖ್ಯೆ:ಎ.ಎಲ್.ಎನ್.(ಕೆ)ಎಸ್.ಆರ್.118/2005-06 ದಿನಾಂಕ: 08-12-2006.

3) ಭೂ ಪರಿವರ್ತನಾ ಶುಲ್ಕ ರೂ.66.701=00 ಹಾಗೂ 4.901 ಪೋಡಿ ಶುಲ್ಕ ರೂ. 55-00 ಒಟ್ಟು ರೂ.71.657=00 ಗಳನ್ನು ಚಲನ್ 2. ಮತ್ತು 3. ದಿನಾಂಕ: 23-12-2006 ರಲ್ಲಿ ಎಸ್.ಬಿ.ಐ.ಯಲ್ಲಿ ಅರ್ಜಿದಾರರು ಜಮಾ ಮಾಡಿರುತ್ತಾರೆ.

* * * * *

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95(2). 95(4) ಮತ್ತು 95(7)ರ ಷರತ್ತುಗಳು ಹಾಗೂ ಷರತ್ತುಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1) ರಂತೆ ಭೂ ಪರಿವರ್ತನಾ ಶುಲ್ಕ ರೂ.66,701=00 ಹಾಗೂ 4,901 ಪೋಡಿ ಶುಲ್ಕ ರೂ. 55-00 ಒಟ್ಟು ರೂ.71,657=00 ಗಳನ್ನು ಅರ್ಜಿದಾರರು ಉಲ್ಲೇಖ (3) ರಲ್ಲಿ ನಮೂದಿಸಿರುವಂತೆ, ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ ಶ್ರೀ. ಕೆ. ಮುನಿಯಪ್ಪ @ ಕೆ. ಮುನಿರಾಜು. ಬಿನ್ ಲೇಟ್. ಕೃಷ್ಣಪ್ಪ, ಮಾರಗೋಂಡನಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು. ರವರ ಅರ್ಜಿಯನ್ನು ಪರಿಗಣಿಸಿ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಾರಗೋಂಡನಹಳ್ಳಿ ಗ್ರಾಮದ ಸರ್ವೆ ನಂ. 19/2 ವಿಸ್ತೀರ್ಣ 01-15. (ಎಕರೆ/ಗುಂಟೆ) ದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಿಸಲಾಗಿದೆ.

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರ ಅಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಐ.ಎ.ಪಿ.ಎ./ಬಿ.ಎಂ.ಆರ್.ಡಿ.ಎ. (ಸ್ಥಳೀಯ ಯೋಜನಾ ಪ್ರಾಧಿಕಾರ) ಬಿ.ಎಂ.ಐ.ಸಿ.ಎ.ಪಿ.ಎ/ಮಾಲಿನ್ಯ ನಿಯಂತ್ರಣಾ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರರಿಗೆ ಯಾವುದೇ ಯಾವುದೇ ಹಕ್ಕನ್ನು ನೀಡುವುದಿಲ್ಲ.

2. ಈ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಐ.ಎ.ಎ.ಪಿ.ಎ./ಬಿ.ಎಂ.ಆರ್.ಡಿ.ಎ. (ಸ್ಥಳೀಯ ಯೋಜನಾ ಪ್ರಾಧಿಕಾರ) ಬಿ.ಎಂ.ಐ.ಸಿ.ಎ.ಪಿ.ಎ/ ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್/ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4. ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ಸಿ.ಎ.ನಿವೇಶನ, ಖಾಲಿ ಜಾಗ, ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಐ.ಎ.ಎ.ಪಿ.ಎ./ಬಿ.ಎಂ.ಆರ್.ಡಿ.ಎ.(ಸ್ಥಳೀಯ ಯೋಜನಾ ಪ್ರಾಧಿಕಾರ (ಬಿ.ಎಂ.ಐ.ಸಿ.ಎ.ಪಿ.ಎ./ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

5. ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೆ ನಿವೇಶನಗಳನ್ನು/ಕಟ್ಟಡಗಳನ್ನು ಸಂಬಂಧಪಟ್ಟ ನೋಂದಣಾಧಿಕಾರಿಗಳಿಂದ/ಉಪನೋಂದಣಾಧಿಕಾರಿಗಳಿಂದ ನೋಂದಾವಣೆ ಮಾಡತಕ್ಕದ್ದಲ್ಲ. ಖಾತೆದಾರರು ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿನ ಪೂರ್ಣ ವಿಸ್ತೀರ್ಣವನ್ನು ಮಾಡಲು ಉದ್ದೇಶಿಸಿದಲ್ಲಿ ಈ ಆದೇಶ ಅಡ್ಡಿ ಬರುವುದಿಲ್ಲ.

6. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ಕುಡಿಯುವ ನೀರು, ರಸ್ತೆ, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7. ಈ ಜಮೀನಿಗೆ ತಾಕು ಪೂಟ್ ಖರಾಬ್ ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 67ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಈ ಖರಾಬಿನ ನಿರ್ಬಂಧದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರ್ ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

8. ಸರ್ಕಾರದ ಆದೇಶ ಸಂಖ್ಯೆ: ಪಿ.ಡಬ್ಲ್ಯೂಡಿ 7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ. ಪಿ.1/7(11)67. ದಿನಾಂಕ: 1.1.1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾಯ್ದಿರಿಸಬೇಕು ಹಾಗೂ ಈ ಹಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ವಸತಿ ಘಟಕಗಳು ಹೊರದೂಡುವ ಹೊಗೆ, ಅನಿಲ, ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ವಸತಿ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ ಇಲಾಖೆಗೆ ಅನುಮತಿ ಹೊಂದಿರತಕ್ಕದ್ದು.

10. ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ರಿಟ್ ಅರ್ಜಿ ಮೇಲ್ಮನವಿ ತೀರ್ಪಿಗೆ ಒಳಪಟ್ಟಿರುತ್ತದೆ.

11. ಪ್ರಸ್ತಾವಿತ ಜಮೀನಿನ ಬಗ್ಗೆ ಯಾವುದೇ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದ್ದಲ್ಲಿ, ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ. ಪ್ರಶ್ನಿತ ಜಮೀನು ಸರ್ಕಾರಿ ಜಮೀನು ವ್ಯಾಪ್ತಿಗೆ ಒಳಪಟ್ಟಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(3) ರ ಅಡಿ ವಿಚಾರಣೆ ನಡೆಸಿ ಹೊರಡಿಸುವ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ಪ್ರಶ್ನಿತ ಜಮೀನು ಮಂಜೂರಾದ ಸರ್ಕಾರಿ ಜಮೀನಾಗಿದ್ದಲ್ಲಿ ತಕ್ಷಣವೇ ಪಕ್ಕ ಪೋಡಿ ಮಾಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

12. ಅರ್ಜಿದಾರರು ಯಾವುದೇ ಸತ್ಯಾಂಶವನ್ನು ಮರೆ ಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ಅಧಿಕೃತಜ್ಞಾಪನ ಪಡೆದಿರುವುದು ಸ್ಪಷ್ಟಪಟ್ಟಲ್ಲಿ, ತನ್‌ತಾನೇ ರದ್ದುಗೊಳ್ಳುತ್ತದೆ ಹಾಗೂ ಇದರಿಂದ ಅರ್ಜಿದಾರರಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ಲುಕ್ಸಾನಿಗೆ ಸರ್ಕಾರವಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

13. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೇ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

**:ಷೆಡ್ಯೂಲ್ ವಿವರ:**

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಾರಗೊಂಡನಹಳ್ಳಿ ಗ್ರಾಮದ ಸರ್ವೆ ನಂ.19/2 ವಿಸ್ತೀರ್ಣ 01-15. (ಎಕರೆ/ಗುಂಟೆ) ದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಆದೇಶವನ್ನು ನೀಡಲಾಗಿದೆ.

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

**ಪ್ರತಿಗಳನ್ನು ಸೂಕ್ತ ಕ್ರಮಕ್ಕಾಗಿ/ಮುಂದಿನ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ.**

1) ತಹಶೀಲ್ದಾರರು, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ರವರಿಗೆ ಮೂಲ ಕಡತ ಹಾಗೂ ಚಲನ್‌ದೊಂದಿಗೆ ಕಳುಹಿಸುತ್ತಾ, ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಜಮೀನಿನ ಭೂ ಕಂದಾಯವನ್ನು ಕಡಿತಗೊಳಿಸುವುದು.
2) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ರಸ್ತೆ, ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
3) ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಪೋಡಿಯಂ ಬ್ಲಾಕ್, ಬೆಂಗಳೂರು ರವರಿಗೆ.
4) ಉಪನಿರ್ದೇಶಕರು, ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪವಿಭಾಗ, ಬೆಂಗಳೂರು ಇವರಿಗೆ ಆರ್.ಟಿ.ಸಿ. ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ.
5) ಉಪನೋಂದಣಾಧಿಕಾರಿಗಳು, ಕೆ.ಆರ್. ಪುರ, ಬೆಂಗಳೂರು ಪೂರ್ವ ತಾಲ್ಲೂಕು, ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6) ಅರ್ಜಿದಾರರಾದ ಶ್ರೀ. ಕೆ. ಮುನಿಯಪ್ಪ @ ಕೆ. ಮುನಿರಾಜು, ಬಿನ್ ಲೇಟ್. ಕೃಷ್ಣಪ್ಪ, ಮಾರಗೊಂಡನಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಇವರಿಗೆ ದೃಢೀಕೃತ ನಕಲನ್ನು ಅಂಚೆ ಮೂಲಕ ಕಳುಹಿಸಲಾಗಿದೆ.
7) ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.
ಬೆಂಗಳೂರು